2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿಃ | 245 / 18 |

| | | |
|---|---|---|
| ಸಾಕ್ಷಿದಾರರ ಹೆಸರು | ವೆಂಕಟೇಶ್ | |
| ತಂದೆಯ ಹೆಸರು | ರಾಮು | ಸಾಕ್ಷಿಗೆ ದಿಃ 04.07.2019 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 37 ವರ್ಷ | |
| ಉದ್ಯೋಗ | ಚಾಲಕ | ಪಿ ಡಬ್ಲ್ಯೂ - 04 |
| ವಾಸ ಸ್ಥಳ | ಗೊಕುಲಮ್ ಮೈಸೂರು | ಸಿ ಡಬ್ಲ್ಯೂ - 23 |

ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಕಳೆದ 18 ವರ್ಷಗಳಿಂದ ಈವರೆಗೂ ಮೈಸೂರಿನ ಅಪೋಲೋ ಬಿ.ಜಿ.ಎಸ್. ಆಸ್ಪತ್ರೆಯಲ್ಲಿ ಆ್ಯಂಬುಲೆನ್ಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ-21 ರವರು ಸಹ ಸದರಿ ಆಸ್ಪತ್ರೆಯಲ್ಲಿ ಆ್ಯಂಬುಲೆನ್ಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ. ಚಾಸಾ-20 ಮತ್ತು 22 ರವರು ನಮ್ಮ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿರುತ್ತಾರೆ. ನಾನು ದಿಃ 24.05.2018 ರ ರಾತ್ರಿ 8.00 ಗಂಟೆಯಿಂದ ದಿಃ 25.05.2018 ರ ಬೆಳಿಗ್ಗೆ 8.00 ಗಂಟೆಯ ತನಕ ಕರ್ತವ್ಯದಲ್ಲಿ ಇದ್ದೆನು.

ದಿಃ 25.05.2018 ರ ಬೆಳಗ್ಗಿನ ಜಾವ 1.30 ಗಂಟೆ ಸಮಯಕ್ಕೆ ನಮ್ಮ ಆಸ್ಪತ್ರೆಗೆ ವಿಜಯನಗರದಿಂದ ಬಂದ ದೂರವಾಣಿ ಕರೆಯ ಮೇರೆಗೆ ಚಾಸಾ-20 ಮತ್ತು 21 ರವರು ಆ್ಯಂಬುಲೆನ್ಸ ನಲ್ಲಿ ಹೋಗಿದ್ದರು. ಅವರು ಅಲ್ಲಿಂದ ದೂರವಾಣಿ ಕರೆ ಮಾಡಿ ನಾವು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬರುತ್ತಿದ್ದು, ಸದರಿ ಮನೆಯ ಮಹಡಿಯಲ್ಲಿ ಇನ್ನೊಬ್ಬ ವ್ಯಕ್ತಿಯನ್ನು ಆಸ್ಪತ್ರೆಗೆ ತರಲು ಆ್ಯಂಬುಲೆನ್ಸ್ ಬೇಕು ಎಂದು ತಿಳಿಸಿದ ಮೇರೆಗೆ ನಾನು ಹಾಗೂ ಚಾಸಾ-22 ರವರು ಅವರು ಹೇಳಿದ ವಿಳಾಸಕ್ಕೆ ಹೋದೆವು, ನಾವು ಹಾಗೇ ವಿಜಯನಗರ 4 ನೇ ಹಂತದಲ್ಲಿರುವ ಒಂದು ಮನೆಗೆ ಹೋಗಿರುತ್ತೇವೆ. ಅಲ್ಲಿ ಮನೆಯ ಬಳಿ ಒಬ್ಬ ವ್ಯಕ್ತಿಯು ಮನೆಯ ಬಳಿ ಕರೆದುಕೊಂಡು ಹೋದರು.

ಮನೆಯ ಒಳಗಡೆ ಟೀಪಾಯಿಯ ಬಳಿ ರೈಸ್ ಬಾತ್ ತರಹದ ಊಟ ಇತ್ತು, ಬೇರೆ ಏನು ನಾನು ಗಮನಿಸಲಿಲ್ಲ. ನಮ್ಮನ್ನು ಸದರಿ ವ್ಯಕ್ತಿಯು ಮನೆಯ 1 ನೇ ಮಹಡಿಯ ರೊಮಿಗೆ ಕರೆದುಕೊಂಡು ಹೋದರು.

ಅದು ಬಲಭಾಗದ ಕೋಣೆಯಲ್ಲಿ ಮಂಚದ ಮೇಲೆ ಒಬ್ಬ ಹೆಂಗಸು ಮಲಗಿದ್ದಳು. ಅವರ ನಾಡಿಯನ್ನು ಚಾಸಾ-22 ರವರು ಪರಿಶೀಲಿಸಲಾಗಿ ಯಾವುದೇ ನಾಡಿಮಿಡಿತ ಕಂಡು ಬಂದಿರುವುದಿಲ್ಲ, ಕತ್ತಿನ ಬಳಿ ಪರಿಶೀಲಿಸಲಾಗಿ ಕೊಯ್ದು ಆಳವಾದ ಗಾಯ ಕಂಡುಬಂದು ಮತ್ತು ಸದರಿ ವ್ಯಕ್ತಿಯು ಮೃತಪಟ್ಟಿದಾರೆ ಎಂದು ತಿಳಿದು ಬಂದಿತ್ತು. ಸದರಿ ವ್ಯಕ್ತಿಯು ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವಂತೆ ಕೋರಿಕೊಂಡರು ನಾವು ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದಿಲ್ಲ, ಎಂದು ತಿಳಿಸಿರುತ್ತೇನೆ.

ಇನ್ನೊಂದು ಕೋಣೆಯಲ್ಲಿ ನೋಡಿದಾಗ ಬೇಡ್ ಶೀಟ್ ನಲ್ಲಿ ಸುತ್ತಿದ ದೇಹ ಇತ್ತು, ಇದನ್ನು ತೆರೆದು ನೋಡಿದಾಗ ಸಂಪೂರ್ಣ ರಕ್ತಸ್ಥಿಕವಾಗಿ ವಿಕಾರವಾಗಿ ಇತ್ತು, ಜೊತೆಯಲ್ಲಿ ಇದ್ದ ವ್ಯಕ್ತಿಯ ಸದರಿ ದೇಹ ಮೃತಪಟ್ಟ ಹೆಂಗಸಿನ ಮಗಳ ಮೃತದೇಹವೆಂದು ಹೇಳಿದ, ಸದರಿ ವ್ಯಕ್ತಿಯು ತನ್ನಗೆ ಹಾಗೂ ಮೃತಪಟ್ಟವರಿಗೆ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋದವರಿಗೆ ಮತ್ತು ಮೃತಪಟ್ಟವರಿಗೆ ಏನು ಸಂಬಂಧ ವೆಂದು ನನಗೆ ತಿಳಿಸಿರುವುದಿಲ್ಲ. ಹಾಗೆಯು ಸದರಿ ವ್ಯಕ್ತಿಗಳು ಹೇಗೆ ಮೃತಪಟ್ಟರು ಎಂದು ನನಗೆ ತಿಳಿಸಿರುವುದಿಲ್ಲ. ನಾನು ಮೇಲೆ ಹೇಳಿದ ವಿಚಾರ ಹೊರತುಪಡಿಸಿ ಬೇರೆ ಯಾವುದೇ ವಿಚಾರವನ್ನು ಪೋಲಿಸರಿಗೆ ಹೇಳಿರುವುದಿಲ್ಲ. ಪೋಲಿಸರು ವಿಚಾರಣೆಗೆ ಬಂದಾಗ ನಮ್ಮನ್ನು ಮನೆಯ ಒಳಗಡೆ ಕರೆದುಕೊಂಡು ಹೋದ ವ್ಯಕ್ತಿ ಮತ್ತು ಚಾಸಾ-20 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಗಾಯಾಳು ತಂದೆ ಮಗ ಎಂದು ಗೋತ್ತಾಯಿತು.

ಸದರಿ ಗಾಯಾಳುವಿಗೆ ಹೇಗೆ ಗಾಯಗಳು ಆದವು ಎಂಬ ವಿಷಯ ಮತ್ತು ಮನೆಯಲ್ಲಿ ಆದ 2 ಸಾವಿನ ಹಿನ್ನೆಲೆ ಏನು ಎಂದು ನನಗೆ ಗೊತ್ತಿಲ್ಲ, ಮೃತದೇಹವನ್ನು ತೋರಿಸಿದಾಗ ಈ ವಿಷಯಗಳನ್ನು ನನಗೆ ಮೃತದೇಹವನ್ನು ತೋರಿಸಿದ ವ್ಯಕ್ತಿ ತಿಳಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿ ಪಿ ರವರು ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಈ ಸಾಕ್ಷಿಯು ತನಿಖಾಧಿಕಾರಿಯ ಮುಂದೆ ನೀಡಿದಾರೆ ಎಂದು ಹೇಳಲಾದ ಹೇಳಿಕೆಯನ್ನು ಗಮನಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಪಿ ಪಿ ರವರಿಂದಃ-</u>

ನಾನು ಮನೆಯ ಒಳಗಡೆ ಟೀಪಾಯಿಯ ಕೆಳಗಡೆ ರಕ್ತವು ಚೆಲ್ಲಾಡಿದ್ದು, ಟೀಪಾಯಿಯ ಮೇಲೆ ಮದ್ಯದ ಪ್ಯಾಕೇಟ, ಸಿಗರೇಟ, 2 ಮದ್ಯದ ಬಾಂಟಲು ಇರುವುದು ಕಂಡುಬಂತು ಅಂದರೆ ನಾನು ಗಮನಿಸಿಲ್ಲ,

ನಾನು ಮನೆಯ ಒಳಗಡೆ ಮತ್ತು ಮಹಡಿಗೆ ಕರೆದುಕೊಂಡು ಹೊದ ವ್ಯಕ್ತಿ ರಾಮಚಂದ್ರ ಎಂದು ನನಗೆ ತಿಳಿದಿರುತ್ತದೆ ಮತ್ತು ಅವರು  ತನ್ನ ಮಗನು ಆತನ ಹೆಂಡತಿ ಮತ್ತು ಮಗಳನ್ನು ಸಾಯಿಸಿದ್ದಾನೆ ಎಂದು ನಾನು ಅವರನ್ನು ವಿಚಾರಿಸಿದಾಗ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಆಸ್ಪತ್ರೆಗೆ ಬಂದು ವಿಚಾರ ಮಾಡಿದಾಗ ಪ್ರಜ್ವಲ್ ಎಂಬುವವನ್ನು ಒಳರೋಗಿಯಾಗಿ ದಾಖಲಾಗಿದು ಆತನ್ನು ತನ್ನ ಹೆಂಡತಿ ಮತ್ತು ಮಗಳನ್ನು ಕೊಲೆ ಮಾಡಿ ಕತ್ತು ಮತ್ತು ಕೈ ಕೊಯ್ದು ಕೊಡು ಆತ್ಮಹತ್ಯಗೆ ಪ್ರಯತ್ನಿಸಿರುತ್ತಾನೆ. ಎಂಬ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಪ್ರಜ್ವಲ್ ಈತನು ನಮ್ಮ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿದ್ದನು, ಎಂದರೆ ಸರಿ.

ನಾನು ಈಗ ನನಗೆ ಓದಿ ಹೇಳಿದಂತೆ ಅಂದರೆ " ಮನೆಯ ಹಾಲ್ ನಲ್ಲಿ ಟೀಪಾಯಿ ಕೆಳಗಡೆ ---------- ಪಾಯಿಸನ್ ಬಾಟಲ್ " ಎಂದು ನಿಪಿ-6 ರಂತೆ ಮತ್ತು " ನಂತರ ಸದರಿ ಆಸಾಮಿ --------ವಿಚಾರ ತಿಳಿಯಿತು " ಎಂದು ನಿಪಿ-6 ಎ ರಂತೆ  ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-6 ಮತ್ತು 6 ಎ ಯಂತೆ ಹೇಳಿಕೆಯನ್ನು ಕೊಟ್ಟದ್ದರು ಸಹ ಈಗ ನಾನು ಹೇಳಿಕೆಯನ್ನು ಕೊಟ್ಟಿಲ್ಲ ಎಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ವಿ.ಬಿ.ಎನ್. ವಕೀಲರಿಂದ -</u>

ಪೋಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಟೀಪಾಯಿಯ ಮೇಲೆ ನಾನು ಹೇಳುವಂತೆ ಊಟ ಇರುವ ತಟ್ಟೆ ಇರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-   ಇಲ್ಲ</u>

(ನನ್ನ ಉಕ್ತಲೇಖನಕ್ಕೆತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು  ಸತ್ರ
ನ್ಯಾಯಾಧೀಶರು,  ಮತ್ತು ಎಮ್.ಎ.ಸಿ.ಟಿ.ಮೈಸೂರು